ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧ Volume 161	ಬೆಳಗಾವಿ, ಬುಧವಾರ, ೧೮, ಮಾರ್ಚ್, ೨೦೨೬ (ಫಾಲ್ಗುಣ, ೨೭, ಶಕವರ್ಷ, ೧೯೪೭) Belagavi, WEDNESDAY, 18, MARCH, 2026 (PHALGUNA, 27, SHAKAVARSHA, 1947)	ಸಂಚಿಕೆ – ೨೪ Issue – 24

ಭಾಗ – 6 ಬಿ

ಬೆಳಗಾವಿ ವಿಭಾಗಕ್ಕೆ ಮತ್ತು ಧಾರವಾಡ, ಹಾವೇರಿ, ಗದಗ, ಬೆಳಗಾವಿ, ವಿಜಯಪುರ, ಬಾಗಲಕೋಟೆ ಮತ್ತು ಉತ್ತರ ಕನ್ನಡ ಜಿಲ್ಲೆಗಳಿಗೆ ಸ್ಥಳೀಯವಾಗಿ ಅನ್ವಯವಾಗುವ ಅಧಿಸೂಚನೆಗಳು ಮತ್ತು ಆದೇಶಗಳು ಶಾಸನಬದ್ಧವಲ್ಲದ ಆದರೆ ಜಮೀನು ಸಂಗ್ರಹಣ ಶಾಸನದ ಮೇರೆಗೆ ಹೊರಡಿಸಿದ ಅಧಿಸೂಚನೆಗಳ ಸಹಿತವಾಗಿ ಸರ್ಕಾರದ ಅಧಿಸೂಚನೆಗಳು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಧಾರವಾಡ ಜಿಲ್ಲೆ, ಧಾರವಾಡ

ನಮೂನೆ- V

[ಕರ್ನಾಟಕ ತಿದ್ದುಪಡಿನಿಯಮ-5, 20(1) (ಬಿ)]

ಭೂಸ್ವಾಧೀನ ಪ್ರಕ್ರಿಯೆ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ಕಲಂ 11(1) ಮೇರೆಗೆ ಅಧಿಸೂಚನೆ

ನಂ.ಎಲ್‌ಎಕ್ಯೂ/ಸಿಆರ್-224/2025-26 **ದಿನಾಂಕ:13-03-2026**

ಸಾರ್ವಜನಿಕ ಉದ್ದೇಶದ ಧಾರವಾಡ ಜಿಲ್ಲೆ ಧಾರವಾಡ ತಾಲೂಕಿನ ಘೋಂಗಡಿಕೊಪ್ಪ ಗ್ರಾಮದ ಜಮೀನನ್ನು ಸಾರ್ವಜನಿಕ ರುದ್ರಭೂಮಿ ಸೌಲಭ್ಯಕ್ಕಾಗಿ ಧಾರವಾಡ ಜಿಲ್ಲೆ ಧಾರವಾಡ ತಾಲೂಕಿನ ಘೋಂಗಡಿಕೊಪ್ಪ ಗ್ರಾಮದ ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿರುವ ಜಮೀನುಗಳ ಸ್ವಾಧೀನತೆಯ ಅವಶ್ಯಕತೆಯಿರುತ್ತದೆಯೆಂದು ಸರ್ಕಾರವು ಭಾವಿಸುತ್ತದೆ. ಈ ಯೋಜನೆಗೆ **ಭೂಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ, ಸೂಕ್ತ**

ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ:30) ಕ್ಕೆ ಅನುಗುಣವಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತೆ ದಿನಾಂಕ:23-07-2019 ರಿಂದ ಜಾರಿಗೆ ಬಂದಿರುವ **ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ 2019** (2019 ರ ಕರ್ನಾಟಕ ಅಧಿನಿಯಮ ಸಂಖ್ಯೆ:16)ರ ಕಲಂ-10(ಎ) ರಡಿ ಮೂಲ ಕಾಯ್ದೆಯ ಅಧ್ಯಾಯ- II&III ರಲ್ಲಿನ ಉಪಬಂಧಗಳನ್ನು ಅನ್ವಯಿಸುವುದರಿಂದ ಸರಕಾರ ಆದೇಶ ಸಂಖ್ಯೆ: ಕಂಇ 29 ಎಕ್ಯೂಡಿ 2026 ದಿನಾಂಕ:13-03-2026 ರಂತೆ ಸಾಮಾಜಿಕ ತತ್ಪರಿಣಾ ಅಧ್ಯಯನ ವರದಿ ಮಾಡುವುದರಿಂದ ವಿನಾಯಿತಿ ನೀಡಿ ಕಂದಾಯ ಇಲಾಖೆಯಿಂದ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಇರುತ್ತದೆ.

ಆದುದರಿಂದ ಈ ಮೂಲಕ ತಿಳಿಸುವುದೇನೆಂದರೆ **ಭೂಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013** (2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-12 ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸಿದಂತೆ ಉಪವಿಭಾಗಾಧಿಕಾರಿಗಳು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು, ಧಾರವಾಡ ಇವರಿಗೆ ಅಧಿಕಾರ ನೀಡಲಾಗಿದೆ.

ಈ ಜಮೀನುಗಳ ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರ್ಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗಾಗಲೀ ಯಾರು ಅಡ್ಡಿ ಮಾಡಕೂಡದು ಅಂತಾ ಎಚ್ಚರಿಸಲಾಗಿದೆ. **ಭೂಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013**(2013ರ ಕೇಂದ್ರ ಅಧಿನಿಯಮ ಸಂಖ್ಯೆ:30)ರ ಕಲಂ-11(1) ಮರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಭಂದಿಸಿದೆ. ಅಂತಹ ಯಾವುದೇ ಕ್ರಮ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಲ್ಲಿ ಅದನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇಅಂತಿಮವಾಗಿ ಸದರಿ ಕಾಯ್ದೆಯನ್ವಯ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಭೂಸ್ವಾಧೀನ ಪ್ರಕ್ರೀಯೆಯಲ್ಲಿ ಪಾರದರ್ಶಕತೆ, ಸೂಕ್ತ ಪರಿಹಾರದ ಹಕ್ಕು, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013(2013ರ ಕೇಂದ್ರ ಅಧಿನಿಯಮ ಸಂಖ್ಯೆ:30) ರ ಕಲಂ-15(1) ರ ಮೇರೆಗೆ ಆಸಕ್ತಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೆಪಣೆಗಳನ್ನು ಈ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಅಧಿಸೂಚನೆ ಪ್ರಕಟಗೊಂಡ 60 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು, ತದನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಸದರಿ ಪ್ರಕರಣದಲ್ಲಿ ಭೂಸ್ವಾಧೀನತೆಗೆ ಒಳಪಡುವ ಜಮೀನುಗಳ ಒಂದು ನಕ್ಷೆಯನ್ನು ಉಪವಿಭಾಗಾಧಿಕಾರಿಗಳು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು ಧಾರವಾಡ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.

-: ಅನುಸೂಚಿ :-

ಜಿಲ್ಲೆ: ಧಾರವಾಡ ತಾಲ್ಲೂಕ: ಧಾರವಾಡ ಹೋಬಳಿ:ಅಮ್ಮಿನಬಾವಿ ಗ್ರಾಮ: ಫೋಂಗಡಿಕೊಪ್ಪ

ಅನಂ	ಖಾತೆದಾರರ ಹೆಸರು / ಅನುಭವದಾರರ ಹೆಸರು	ಸರ್ವೆ ನಂಬರ	ಜಮೀನಿನ ತರಹೆ	ಚೆಕ್ಕಬಂದಿ				ಭೂ ಸ್ವಾಧೀನತೆಗೆ ಒಳಪಡುವ ಕ್ಷೇತ್ರ
				ಉತ್ತರ	ದಕ್ಷೀಣ	ಪೂರ್ವ	ಪಶ್ಚೀಮ	
1	ಶ್ರೀ ಕುಶಲಚಂದ್ರ ತಂದೆ ಬಾಬುಲಾಲಜಿ ಜೈನ್	30/1	ಶೇತ್ಕಿ	ಬ್ಲಾಕ ನಂ.32	ಬ್ಲಾಕ ನಂ.30/2	ಸರಕಾರಿ ರಸ್ತೆ	ಬ್ಲಾಕ ನಂ.30	**00ಎ-20ಗುಂ-00ಆ**

ವಿಶೇಷ ಭೂಸ್ವಾಧೀನಾಧಿಕಾರಿಗಳು
ಹಾಗೂ ಉಪವಿಭಾಗಾಧಿಕಾರಿಗಳು
ಉಪವಿಭಾಗ ಧಾರವಾಡ

ಜಿಲ್ಲಾಧಿಕಾರಿಗಳು, ಧಾರವಾಡ

PR-221

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಳಗಾವಿ

SOMASHEKAR B E